<u>ದಿನಾಂಕ **28-08-2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಆರ್ ಡಿ ಪಿ ವಕೀಲರಿಂದಃ</u>

**1.** ನಾನು ಪದವಿಧರ. ಕನ್ನಡ ಭಾಷೆಯಲ್ಲಿ ಪದವಿ ಮುಗಿಸಿರುತ್ತೇನೆ. ವಾದಿ ನನ್ನ ಅಕ್ಕ ಎಂದರೆ ಸರಿ. ನಾನು ಹತ್ತರಗಿಯಲ್ಲಿ ವಾಸ ಮಾಡುತ್ತಿರುತ್ತೇನೆ. **2-3** ತಿಂಗಳುಗಳಿಂದ ಹತ್ತರಗಿಯಲ್ಲಿ ವಾಸಮಾಡುತ್ತಿರುತ್ತೇನೆ. ಅದಕ್ಕೂ ಮೊದಲು ನಾನು ಹಿರೇಕೂಡಿಯ ನಮ್ಮ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದೆ. **30** ವರ್ಷಗಳ ಹಿಂದೆ ನಮ್ಮ ಕುಟುಂಬದಲ್ಲಿ ವಿಭಾಗವಾಗಿರುತ್ತದೆ. ವಾದಿಗೆ **12** ವರ್ಷವಿದ್ದಾಗ ವಿವಾಹ ಮಾಡಿಕೊಟ್ಟಿರುತ್ತೇವೆ. ಕೋಥಳಿ ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿರುತ್ತೇವೆ. ಆಕೆಯ ಗಂಡನ ಹೆಸರು ಯಲ್ಲಪ್ಪಾ ಭಜಂತ್ರಿ. ಆಕೆ ಗಂಡನ ಜೊತೆ ವಾಸ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಆಕೆ ಗಂಡನ ಜೊತೆ ಬಾಳ್ವೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

**2.** ಅವರುಗಳ ನಡುವೆ ಯಾವುದೇ ವಿವಾಹ ವಿಚ್ಛೆಧನವಾಗಿರುವುದಿಲ್ಲ. ವಾದಿ ಗಂಡನ ಜೊತೆ ವಾಸವಿದ್ದರೂ ಸಹ ಆಕೆ ಗಂಡನ ಜೊತೆ ಇರಲಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬೇರೆಯಾದಾಗನಿಂದ ನನ್ನ ಹಾಗೂ ನನ್ನ ತಂದೆ ತಾಯಿ ಹಾಗೂ ಅಣ್ಣ-ತಮ್ಮಂದಿರ ಹಾಗೂ ಅಕ್ಕ ತಂಗಿರುಗಳ ಪಡಿತರ ಚೀಟಿಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ವಾದಿಯ ಪಡಿತರ ಚೀಟಿ ಇದೆಯೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ವಾದಿ ಹಿರೇಕೊಡಿಯಲ್ಲಿ ವಾಸವಿಲ್ಲದೆ ಇರುವುದರಿಂದ ಆಕೆಯ ಪಡಿತರ ಚೀಟಿ, ಚುನಾವಣಾ ಚೀಟಿ, ಆಧಾರ ಕಾರ್ಡ ಇವುಗಳು ಹಿರೇಕೊಡಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**3.** ನನ್ನ ತಂದೆ ತಾಯಿಯ ಕುಟುಂಬದ ಪಡಿತರ ಚೀಟಿಯಲ್ಲಿ ವಾದಿಯ ಹೆಸರು ಇದೆಯೋ ಇಲ್ಲವೋ ನಾನು ನೋಡಿರುವುದಿಲ್ಲ. ಈ ಪ್ರಕರಣದ ಪ್ರತಿವಾದಿಗಳ ಪರಿಚಯ ನನಗಿರುತ್ತದೆ ನನಗೂ ಹಾಗೂ ಈ ಪ್ರಕರಣದ ಪ್ರತಿವಾದಿಗಳಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಪ್ರತಿವಾದಿಗಳು ಮಾಲಗಾರ ಸಮುದಾಯದವರು. ನಾವು ಭಜಂತ್ರಿ ಸಮುದಾಯದವರು.

**4.** ಮಹಾದೇವ ಮಾಲಗಾರರವರು ಬಹಳ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಯಾವಾಗ ಮೃತರಾಗಿರುತ್ತಾರೆ ಅಂತಾ ನನಗೆ ಗೊತ್ತಿರುವುದಿಲ್ಲ. ಸದರಿಯವರಿಗೆ **3** ಜನ ಮಕ್ಕಳು ಅವರಲ್ಲಿ ಒಬ್ಬರು ಮೃತರಾಗಿರುತ್ತಾರೆ ಎಂದು ನುಡಿಯುತ್ತಾರೆ. ರಾಮಾ ಮಹಾದೇವ ಮಾಲಗಾರರವರು ಮೃತರಾಗಿರುತ್ತಾರೆ. ಲಕ್ಷಣ ಮತ್ತು ಸುಶೀಲಾರವರು ಜೀವಂತವಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರ ಆಸ್ತಿಯಲ್ಲಿ ಏನೇನು ವ್ಯವಹಾರಗಳಾಗಿರುತ್ತವೆ ಅಂತಾ ನನಗೆ ಮಾಹಿತಿ ಇರುವುದಿಲ್ಲಾ.

**5.** ಸುಶೀಲಾ ಮಾಲಗಾರರವರು ದಾವಾ ಸಲ್ಲಿಸಿದ್ದು ಅದು ತನ್ನಂತೆ ಆಗಿರುತ್ತದೆ ಅಂತಾ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಜಮೀನುಗಳಲ್ಲಿ ಆಕೆಯ ಹೆಸರನ್ನು ಹಚ್ಚಿಸುವ ಸಲುವಾಗಿ ದಾವಾ

ಸಲಿಸಿದ್ದರು ಎಂದು ನುಡಿಯುತ್ತಾರೆ. 765/2 ಎ, 26.08 ಗುಂಟೆ, 266/2 ಬಿ 26.08 ಗುಂಟೆ ಜಮೀನುಗಳ ಬಗ್ಗೆ ದಾವಾ ಸಲ್ಲಿಸಿದ್ದರು. ದಾವಾ ನನ್ನಂತೆ ಆಗಿರುತ್ತದೆ ಅಂತಾ ಹೇಳುತ್ತಿದ್ದರು. ಇದನ್ನು ಹೊರತುಪಡಿಸಿ ನನಗೆ ಏನೂ ಗೊತ್ತಿರುವುದಿಲ್ಲ.

6. ಮಹಾದೇವ ಮೃತರಾದ ನಂತರ ಆತನ ಹೆಂಡತಿ ಮಕ್ಕಳು ವಾರಸುದಂತೆ ಜಮೀನುಗಳಿಗೆ ಅವರುಗಳ ಹೆಸರುಗಳನ್ನು ಹಚ್ಚಿಕೊಂಡಿದ್ದಾರೆ ಎಂದರೆ ಸರಿ. ಹೆಸರು ಹಚ್ಚಿದ ನಂತರ ಲಕ್ಷ್ಮಣ ಈತನೂ ತನ್ನ ಪಾಲಿನ ಜಮೀನನ್ನು ಪ್ರತಿವಾದಿ ನಂಬರ 2 ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖರೀದಿ ತೆಗೆದುಕೊಂಡಾಗಿನಿಂದ 2 ನೇ ಪ್ರತಿವಾದಿ ದಾವಾ ಸ್ವತ್ತಿನ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖರೀದಿ ಪತ್ರದಂತೆ ಆತನ ಹೆಸರು ಉತಾರದಲ್ಲಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ಪ್ರಕಾರ ತಾರಾಬಾಯಿಯವರು ಹೆಸರು ಉತಾರದಲ್ಲಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. ಮೃತ ಸುಶೀಲಾರವರು ನನಗೆ ನನ್ನ ತಾಯಿಯಿಂದ ಪರಿಚಯಸ್ಥರು. ನಮ್ಮ ಮನೆ ಹಿರೇಕೊಡಿ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಮೃತ ಸುಶೀಲಾರವರು ತೋಟದಲ್ಲಿಯ ಮನೆಯಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿ ಮೊದಲು ಊರಿನಲ್ಲಿ ಇದ್ದರು ಎಂದು ನುಡಿಯುತ್ತಾರೆ. ತದನಂತರ ತೋಟದಲ್ಲಿ ಮನೆ ಕಟ್ಟಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಮೃತ ಸುಶೀಲಾ ಇವರು ಮಾಳಿ ಗಲ್ಲಿಯಲ್ಲಿ ವಾಸವಿದ್ದರು. ನನ್ನದು ಮಾಳಿ ಗಲ್ಲಿಯಲ್ಲಿ ಮನೆ ಇರುತ್ತದೆ. ನಮ್ಮ ತಂದೆ -ತಾಯಿಯದು ಭಜಂತ್ರಿ ಗಲ್ಲಿಯಲ್ಲಿ ಮನೆ ಇರುತ್ತದೆ. ನಾನು ಶಾಲೆ ಮುಗಿದ ನಂತರ ನೌಕರಿಗೆ ಹೋಗುತ್ತಿದ್ದೆ ಎಂದರೆ ಸರಿ. ನಾನು ಒಕ್ಕಲುತನ ಮಾಡುವುದಿಲ್ಲ ಎಂದರೆ ಸರಿ. ನಾನು ಮಾಲಗಾರರವರ ಮನೆಯ ಕೂಲಿ ಕೆಲಸಕ್ಕೆ ಹೋಗಿರುವುದಿಲ್ಲ.

8. ಮೃತ ಸುಶೀಲಾರವರು ನಮ್ಮ ಮನೆಯ ನೆರೆ ಹೊರೆಗೆ ಇತ್ತು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಸುಶೀಲಾರವರು ಆಕೆ ಗಂಡ, ಮಕ್ಕಳು ಹೊಲದಲ್ಲಿ ತೋಟದ ಮನೆಯಲ್ಲಿ ವಾಸವಿದ್ದರು ಎಂದರೆ ಸಾಕ್ಷಿ ಈಗ 5-6 ವರ್ಷಗಳ ಹಿಂದೆ ತೋಟದ ಮನೆಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ಈಗ ಪ್ರತಿವಾದಿ ಹಾಗೂ ಪ್ರತಿವಾದಿಯ ಮಕ್ಕಳು ಸದರಿ ತೋಟದ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಲ್ಲಿ ವಾಸವಿದ್ದರೂ ಸಹ ವಾಸವಿರುವುದಿಲ್ಲ ಅಂತಾ ನನ್ನ ಅಕ್ಕನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಸುಶೀಲಾರವರನ್ನು ಆಕೆಯ ಮಕ್ಕಳು ಮೊದಲಿನಿಂದಲೂ ಚೆನ್ನಾಗಿ ನೋಡಿಕೊಂಡಡು ಬರುತ್ತಿದ್ದರು ಎಂದರೆ ಸರಿಯಲ್ಲ.

9. ಆಕೆ ಮೃತಳಾಗುವವರೆಗೂ ಆಕೆಯ ಮಕ್ಕಳೇ ಆಕೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರವನ್ನು ತಯಾರು ಮಾಡಲು ಸುಶೀಲಾ ಮಾಲಗಾರ ರವರು ಮಾಹಿತಿ ಕೊಟ್ಟಿರುತ್ತಾರೆ. ಸುಶೀಲಾ ಮಾಲಗಾರವರನ್ನು ನಾನು 50 ವರ್ಷದಿಂದಲೂ ಬೇಟ್ಟಿಯಾಗುತ್ತಿದ್ದೆ. ಸುಶೀಲಾ ಮಾಲಗಾರರವರ ಆಸ್ತಿಗಳಲ್ಲಿ ನಾನು ಪಂಚಕೆ ಮಾಡಿರುವುದಿಲ್ಲ. ಸುಶೀಲಾರವರ ಮಗಳ ಮದುವೆಗೆ ನಾನು ಹೋಗಿರುವುದಿಲ್ಲ. ಸುಶೀಲಾರವರ ಮೊಮ್ಮಗನ ಮದುವೆಗೆ ನಾನು ಹೋಗಿರುವುದಿಲ್ಲ. ಸುಶೀಲಾರವರು ಸಾಯುವ ಮೊದಲು ನಾನು

ಖಾಯಂವಾಗಿ ಬೇಟ್ಟಿಯಾಗುತ್ತಿದ್ದೆ. ಸುಶೀಲಾರವರು ಮೃತರಾಗುವ 15 ದಿನಗಳ ಹಿಂದೆ ಬೇಟ್ಟಿಯಾಗಿದ್ದೆ ಎಂದು ನುಡಿಯುತ್ತಾರೆ.

10. ಸುಶೀಲಾರವರು 20-07-2013 ರಂದು ಮೃತರಾಗಿರುತ್ತಾರೆ. ನಾನು 15 ದಿನಗಳ ಹಿಂದೆ ಬೇಟ್ಟಿಯಾಾದ ಮೃತ್ಯು ಪತ್ರವನ್ನು ಮಾಡಿಟ್ಟಿರುತ್ತೇನೆ ಆಕೆಗೆ ಕೊಡಬೇಕು ಅಂತಾ ಹೇಳಿದ್ದರು ಎಂದು ನುಡಿಯುತ್ತಾರೆ. ಆಕೆ ನನಗೆ ಮೃತ್ಯು ಪತ್ರವನ್ನು ತೋರಿಸಿದ್ದರು. ಸಾಯುವ 15 ದಿನಗಳ ಮುಂಚೆ ತೋರಿಸಿದ್ದರು. ಸಾಕ್ಷಿ ಪುನಃ ಮೃತ್ಯು ಪತ್ರವನ್ನು ಮಾಡುವಾಗ ತೋರಿಸಿದ್ದರು ಎಂದು ನುಡಿಯುತ್ತಾರೆ. ಮೃತ್ಯು ಪತ್ರವನ್ನು ಮಾಡುವಾಗ ನಾನು ಇದ್ದೆ ಎಂದು ನುಡಿಯುತ್ತಾರೆ. ಮೃತ್ಯು ಪತ್ರ ಬರೆಯುವ ಒಂದು ವಾರದ ಮುಂಚೆ ಮೃತ ಸುಶೀಲಾರವರು ಬೇಟ್ಟಿಯಾಗಿದ್ದೆ ಎಂದು ನುಡಿಯುತ್ತಾರೆ. ಯಾವ ದಿನ ಹಾಗೂ ತಾರೀಖು ಅಂತಾ ನೆನಪಿರುವುದಿಲ್ಲ. ಸಂಜೆಯ ವೇಳೆ 4-5 ಗಂಟೆಯಲ್ಲಿ ಬೇಟ್ಟಿಯಾಗಿರುತ್ತೇನೆ.

11. ಆಕೆ ನನಗೆ ಬಾ ಅಂತಾ ಹೇಳಿ ಕಳುಹಿಸಿದ್ದರಿಂದ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೋಡುವ ಹಾಗೆ ಆಗಿದೆ ಬಾ ಅಂತಾ ಕರೆಯಿಸಿದ್ದರು ಹಾಗಾಗೀ ಹೋಗಿದ್ದೆ. ನನ್ನಂತೆ ಬೇರೆ ಯಾರು ಆಕೆಯ ಮನೆಗೆ ಹೋಗುತ್ತಿದ್ದರು ಅಂತಾ ನನಗೆ ಗೊತ್ತಿರುವುದಿಲ್ಲ. ಮೃತ್ಯು ಪತ್ರ ಬರೆಯುವ 8 ದಿನಗಳ ಮುಂಚೆ ಆಕೆ ನನ್ನನ್ನು ಮನೆಗೆ ಕರೆಯಿಸಿ ಸುಶೀಲಾರವರಿಗೆ ಮೃತ್ಯು ಪತ್ರ ಬರೆಯುತ್ತಿದ್ದೇನೆ ಅಂತಾ ತಿಳಿಸಿದ್ದರು. ನನಗೆ ಈ ವಿಚಾರ ಹೇಳಿದಾಗ ಸುಶೀಲಾ ಮಾಲಗಾರರವರು ಒಬ್ಬರೆ ಇದ್ದರು. ಅವರು ಹೇಳಿದ 8 ದಿನಗಳ ನಂತರ ಚಿಕ್ಕೋಡಿಗೆ ಬಂದಿರುತ್ತೇವೆ. ನಾನು ಆಕೆಗೆ ಏನೂ ಹೇಳಿರುವುದಿಲ್ಲ. ಮೃತ್ಯು ಪತ್ರ ಮಾಡುವಾಗ ನಾನು ರಾಜು ಎ ಎಸ್ ಸೈಬನ್ನವರ. ಎಸ್ ಎಂ ಕಾಂಬಳೆ ವಕೀಲರು, ಎಸ್ ಎಸ್ ಕಟ್ಟಿರವರು ಇದ್ದರು. ಇವರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಬೆಳಿಗ್ಗೆ 10-30 ಗಂಟೆಗೆ ಚಿಕ್ಕೋಡಿಗೆ ಬಂದಿರುತ್ತೇವೆ. ಮೊದಲು ಸುಶೀಲಾ ಮಹಾದೇವ ಮಾಲಗಾರ ರವರು ಚಿಕ್ಕೋಡಿ ಸಬ್ ರಜಿಸ್ಟರ ಕಚೇರಿಯಲ್ಲಿ ಇರುತ್ತೇವೆ ಬನ್ನಿ ಅಂತಾ ನಮಗೆ ತಿಳಿಸಿದ್ದರು ನಂತರ ನಾವು ಚಿಕ್ಕೋಡಿ ಸಬ್ ರಜಿಸ್ಟರ ಕಚೇರಿಗೆ ಹೋದೆವು.

12. ನಾವು ಕಚೇರಿಗೆ ಹೋದ ನಂತರ ವಕೀಲರು ಸುಶೀಲಾ ಮಹಾದೇವ ಮಾಲಗಾರರವರು ಹೇಳಿದಂತೆ ಪತ್ರವನ್ನು ತಯಾರು ಮಾಡಿದರು. ಸಬ್ ರಜಿಸ್ಟರ ಕಚೇರಿಯಲ್ಲಿ ಪತ್ರವನ್ನು ತಯಾರು ಮಾಡಿದರು. ವಕೀಲರು ಮೃತ್ಯು ಪತ್ರವನ್ನು ಬರೆದು ಸಹಿ ಮಾಡು ಅಂತಾ ಹೇಳಿದ ಮೆರೆಗೆ ನಾನು ಸಹಿ ಮಾಡಿರುತ್ತೇನೆ. ಸುಶೀಲಾ ಮಹಾದೇವ ಮಾಲಗಾರರವರು ಆ ಸಮಯದಲ್ಲಿ ದಾವಾ ಸ್ವತ್ತಿನ ಉತಾರ ಹಾಗೂ ದಾವೆ ವಜಾವಾದ ದಾಖಲೆ ಪತ್ರಗಳನ್ನು ತಂದಿದ್ದರು. ಉತಾರದಲ್ಲಿ ನಾನು ನೋಡಿದಾಗ ಸುಶೀಲಾ ಮಹಾದೇವ ಮಾಲಗಾರರವರ ಮಗ ಹಾಗೂ ಮಗಳು ಹಾಗೂ ಅಳಿಯನ ಹೆಸರು ಇತ್ತು ಎಂದು ನುಡಿಯುತ್ತಾರೆ.

13. ದಾವಾ ನಿಕಾಲೆಯಾದ ದಾಖಲೆಯ ಬಗ್ಗೆ ನಾನು ಚೌಕಾಶಿ ಮಾಡಿರುತ್ತೇನೆ. ಅವರು ದಾವಾ ಸ್ವತ್ತಿನಲ್ಲಿ ನನ್ನ ಹೆಸರು ನಮೂದಾಗಬೇಕೆಂದು ದಾವಾ ಸಲ್ಲಿಸಿದ್ದೆ, ಅದು ನಿಕಾಲೆಯಾಗಿರುತ್ತದೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ದಾವೆ ನಿಕಾಲಾದ ನಂತರ ಅಪೀಲು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವೆ ನಿಕಾಲೆಯಾದ ಬಗ್ಗೆ ಯಾರಾದರೂ ಮೇಲ್ಮನವಿ ಸಲ್ಲಿಸಿದ್ದರಾ

ಅಥವಾ ದಾವೆಯಂತೆ ಕಬ್ಜೆ ಪಡೆದುಕೊಂಡಿದ್ದೀರಾ ಎಂಬ ಬಗ್ಗೆ ಚೌಕಾಶಿ ಮಾಡಿರುವುದಿಲ್ಲಾ. ಸುಶೀಲಾ ಮಹಾದೇವ ಮಾಲಗಾರರವರು ಹೇಳಿದಂತೆ ನಾವು ಚಿಕ್ಕೋಡಿಗೆ ಬಂದು ಮೃತ್ಯು ಪತ್ರ ಮಾಡಿಸಿರುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**14.** ವಕೀಲರು ಮೊದಲು ಕಚ್ಚಾ ಟಿಪ್ಪಣಿ ಕೈಯಲ್ಲಿ ಬರೆದುಕೊಂಡು ನಂತರ ಬೆರಳಚ್ಚು ಮಾಡಿರುತ್ತಾರೆ. ಸುಮಾರು 2-3 ತಾಸು ಆಗಿರುತ್ತದೆ. ವಕೀಲರು ಮೃತ್ಯು ಪತ್ರವನ್ನು ಮಾಡಿರುತ್ತಾರೆ ಹಾಗೂ ಸುಶೀಲಾರವರು ಹೆಬ್ಬೆಟ್ಟನು ಒತ್ತಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಶೀಲಾ ಮಹಾದೇವ ಮಾಲಗಾರ ಅವರು ಮೃತರಾದ ನಂತರ ನಾನು ನನ್ನ ಅಕ್ಕ, ಎಸ ಎಂ ಕಾಂಬಳೆ ವಕೀಲರು ಹಾಗೂ ಸಾಕ್ಷಿದಾರರು ಸೇರಿ ಮೃತ್ಯು ಪತ್ರವನ್ನು ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**15.** ನನಗೆ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಸ್ವಲ್ಪ ಸ್ವಲ್ಪ ಕಾಣಿಸುತ್ತದೆ ಎಂದು ನುಡಿಯುತ್ತಾರೆ. ಸುಶೀಲಾ ಮಹಾದೇವ ಮಾಲಗಾರವರು ದಾವೆ ಸಲ್ಲಿಸುವಾಗ ಸಹಿ ಮಾಡಿರುತ್ತಾರೆ. ಸದರಿ ಸಹಿಗಳನ್ನು ನೋಡಿದ್ದೀರಾ ಎಂದರೆ ನನಗೆ ನೋಡುವ ಅವಶ್ಯಕತೆ ಇರಲಿಲ್ಲಾ ಎಂದು ನುಡಿಯುತ್ತಾರೆ. ನಾನು ವಾರ-15 ದಿನಗಳಲ್ಲಿ ಬೇಟ್ಟಿಯಾಗುತ್ತಿದ್ದು ಆಕೆಯ ಬ್ಯಾಂಕ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆಕೆಯ ಸಹಿಯನ್ನು ತೆಗೆದುಕೊಂಡು ಬ್ಯಾಂಕ ಹಾಗೂ ಇತರೇ ಕಚೇರಿಗಳಿಗೆ ಕೊಟ್ಟಿರುವುದಿಲ್ಲ.

**16.** ಮಹಾದೇವ ಮಾಲಗಾರರವರು ಮೃತರಾದ ನಂತರ ವಾರಸದಂತೆ ಹೆಸರು ಹಚ್ಚುವಾಗ ನನ್ನನ್ನು ಕರೆದು ಅವರು ಸಲಹೆ ಹಾಗೂ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ. ಮೃತ್ಯು ಪತ್ರದಲ್ಲಿರುವ ಸಹಿಯನ್ನು ಮಾತ್ರ ನೋಡಿರುತ್ತೇನೆ. ಉಳಿದ ಯಾವುದೇ ದಾಖಲೆಗಳಲ್ಲಿ ಅವಳ ಸಹಿಯನ್ನು ನಾನು ನೋಡಿರುವುದಿಲ್ಲ. ಮೃತ್ಯು ಪತ್ರ ಖೋಟ್ಟಿ ಇದ್ದರೂ ಸಹ ನನ್ನ ಅಕ್ಕ ಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರ ಖೊಟ್ಟಿ ಇದೆ ಅಂತಾ ನನಗೆ ಗೊತ್ತಿದ್ದರು ಸಹ , ನನ್ನ ಅಕ್ಕಳ ಮಾತು ಕೇಳಿಕೊಂಡು ಸುಶೀಲಾ ಮಹಾದೇವ ಮಾಲಗಾರರವರು ಸಹಿಯನ್ನು ಖೋಟ್ಟಿ ಮಾಡಿರುತ್ತೀರಾ ಎಂದರೆ, ಸಾಕ್ಷಿ ಸುಶೀಲಾ ಮಹಾದೇವ ಮಾಲಗಾರ ರವರು ಮೃತ್ಯು ಪತ್ರಕ್ಕೆ ಸಹಿ ಮಾಡಿದ್ದು ಸತ್ಯವಿರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಅಕ್ಕ ಸುಶೀಲಾರವರು ಸೇರಿ ಮೃತ್ಯು ಪತ್ರಕ್ಕೆ ಸಹಿ ಮಾಡಿ ಅದು ಸುಶೀಲಾರವರ ಸಹಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**17.** ರಾಜೇಂದ್ರ ಎಸ್ ಸೈಬನ್ನವರವರು ಗುರುತಿಸಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಕೆಯ ಮಾನಸಿಕ ಪರಿಸ್ಥಿತಿ ಸರಿ ಇತ್ತು, ಆಕೆ ಮೃತ್ಯು ಪತ್ರ ಬರೆದುಕೊಟ್ಟಿರುತ್ತಾಳೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಶೀಲಾ ಮಹಾದೇವ ಮಾಲಗಾರರವರಿಗೆ ವಯಸ್ಸಾಗಿದ್ದು, ಆಕೆ ಅವಳ ಮಗಳೊಂದಿಗಗೆ ಇದ್ದರು, ಆಕೆ ಯಾವುದೇ ಮೃತ್ಯು ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ, ಸುಶೀಲಾ ಮಹಾದೇವ ಮಾಲಗಾರರವರ ಮಗಳು ಜುಗುಳದಲ್ಲಿ ಇದ್ದರು ಸುಶೀಲಾ ಭಜಂತ್ರಿ ಇವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಸುಶೀಲಾ ಮಹಾದೇವ ಮಾಲಗಾರರವರನ್ನು ಸುಶೀಲಾ ಭಜಂತ್ರಿ ಇವರು ನೋಡಿಕೊಳ್ಳುತ್ತಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಸುಶೀಲಾರವರಿಗೆ ವಯಸ್ಸಾಗಿದ್ದರಿಂದ ಮೃತ್ಯು ಪತ್ರ ಬರೆದುಕೊಡುವ ಮಾನಸಿಕ ಸ್ಥಿತಿಯಲ್ಲಿ ಇರಲಿಲಾಲ ಎಂದರೆ ಸಾಕ್ಷಿ, ಅಜ್ಜಿಯವರಿಗೆ 75 ವರ್ಷ ವಯಸ್ಸಾಗಿತ್ತು, ಮಾನಸಿಕ ಪರಿಸ್ಥಿತಿಯಿಂದ ಉತ್ತಮರಾಗಿದ್ದರು ಎಂದು ನುಡಿಯುತ್ತಾರೆ ಸ್ವ-ಇಚ್ಛೆಯಿಂದ ಬರೆದುಕೊಟ್ಟಿರುತ್ತಾರೆ. ನಾನು ನನ್ನ ಅಕ್ಕನಿಗೆ ಮೃತ್ಯು ಪತ್ರವನ್ನು ನೊಂದ ಮಾಡಿಸಿಕೋ ಅಂತಾ ಹೇಳಿರುವುದಿಲ್ಲ . ಸೈಬನ್ನವರು ಸಹ ಸಹಿ ಮಾಡಿರುವುದಿಲ್ಲಾ, ಅದನ್ನು ತಾವುಗಳೇ ಮಾಡಿರುತ್ತೀರಾ ಎಂಬ ಪ್ರಶ್ನೆಗೆ, ಸಾಕ್ಷಿ ಸೈಬನ್ನವರೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

19. ಸುಶೀಲಾ ಮಹಾದೇವ ಮಾಲಗಾರರವರನ್ನು ಅವರ ಮಗಳು ಆಸ್ಪತ್ರೆಗೆ ತೋರಿಸುತ್ತಿದ್ದರು ಎಂದರೆ ಸಾಕ್ಷಿ ಸುಶೀಲಾ ಭಜಂತ್ರಿರವರೇ ಅವರನ್ನು ಆಸ್ಪತ್ರೆಗೆ ತೋರಿಸುತ್ತಿದ್ದರು ಎಂದು ನುಡಿಯುತ್ತಾರೆ. ವಾದಿಗೆ ಕೂಲಿ ಕೆಲಸವನ್ನು ಬಿಟ್ಟು ಬೇರೆ ಕೆಲಸ ಇರಲಿಲ್ಲಾ ಎಂದರೆ ಸರಿ. ಆಸ್ಪತ್ರೆಗೆ ತೋರಿಸಿದ ಚೀಟಿಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ ಬಗ್ಗೆ ನಾನು ಚೌಕಾಶಿ ಮಾಡಿರುವುದಿಲ್ಲ. ನಾನು ನಮ್ಮ ಅಕ್ಕಳಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ. ತಂದೆ-ತಾಯಿಗೆ ಕೊಡುತ್ತಿದ್ದೆ. ಸುಶೀಲಾ ಭಜಂತ್ರಿ ರವರ ಮೇಲೆ ಸುಶೀಲಾ ಮಹಾದೇವ ಮಾಲಗಾರರವರಿಗೆ ಪ್ರೀತಿ ಇದ್ದುದ್ದರಿಂದ ಮೃತ್ಯು ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಅಕ್ಕ ಶಾಲೆಗೆ ಹೋಗುತ್ತಿದ್ದಾಗಿನಿಂದ ಹಿರೇಕೊಡಿಗೆ ಹೋಗಿ ಸುಶೀಲಾರವರನ್ನು ಬೇಟ್ಟಿ ಮಾಡಿ ಬರುತ್ತಿದ್ದೆವು ಅಂತಾ ಸುಳ್ಳು ಹೇಳುತ್ತೀದ್ದೀರಾ ಎಂದರೆ ಸಾಕ್ಷಿ ನನ್ನ ಅಕ್ಕ ಯಾವುದೇ ಶಿಕ್ಷಣ ಮಾಡಿರುವುದಿಲ್ಲಾ ನಾನು ಮಾತ್ರ ಶಾಲೆಗೆ ಹೋಗಿ ಬಂದು ಮಾಡುತ್ತಿದೆ ಎಂದು ನುಡಿಯುತ್ತಾರೆ.

20. ನನ್ನ ತಾಯಿ ಹಾಗೂ ಮೃತ ಸುಶೀಲಾರವರು ಗೆಳತಿಯರಾಗಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಕ್ಕ ಸುಶೀಲಾರವರು ಮೃತ ಸುಶೀಲಾರವರನ್ನು ಸ್ವಂತ ತಾಯಿಯಂತೆ ನೋಡಿಕೊಳ್ಳುತ್ತಿದ್ದಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಸಂದರ್ಬದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.